

# ಹೊಸ ಚಿತ್ತಾರ!

**‘ಚೆಲುವಿನ ಚಿತ್ತಾರ’ದ ಅಮೂಲ್ಯ ಅವರ ಕೈಗಳಲ್ಲೀಗ ಮದರಂಗಿಯ ಚಿತ್ತಾರ! ಮೇ 12ರಂದು ಅಮೂಲ್ಯ ಮದುವೆ ಹಾಗೂ ಅವರ ನಟನೆಯ ‘ಮಾಸ್ತಿಗುಡಿ’ ಸಿನಿಮಾದ ಬಿಡುಗಡೆ.**

ನಟನಾಗಿ ಗಣೇಶ್ ಜನಪ್ರಿಯತೆ ಹಾಗೂ ನಿರ್ದೇಶಕನಾಗಿ ಎಸ್. ನಾರಾಯಣ್ ಕ್ರಿಯಾಶೀಲತೆ ಸಾಕಷ್ಟು ಉಳಿದುಕೊಂಡಿದ್ದ ದಿನಗಳಲ್ಲಿ ತೆರೆ ಕಂಡ ಚಿತ್ರ ‘ಚೆಲುವಿನ ಚಿತ್ತಾರ’. ಈ ಚಿತ್ರದ ಗೆಲುವಿನಲ್ಲಿ ನಟಿ ಅಮೂಲ್ಯ ಅವರ ಕೊಡುಗೆ ಮುಖ್ಯವಾದುದಾಗಿತ್ತು. ಶಾಲೆಯ ಅಂಗಳದಿಂದ ನೇರವಾಗಿ ಶೂಟಿಂಗ್‌ಗೆ ಬಂದಂತಿದ್ದ ಹಾಲುಗೆನ್ನೆಯ ಹುಡುಗಿ ಚಿತ್ರರಸಿಕರಿಗೆ ಇಷ್ಟವಾಗಿದ್ದಳು. ಅದೇ ಹುಡುಗಿ ಈಗ ಹಸೆಮಣೆ ಏರುತ್ತಿದ್ದಾಳೆ. ಆದರೆ ಈಗಲೂ ಪ್ರೇಕ್ಷಕರ ಮನಸ್ಸಿನಲ್ಲಿರುವ ಅಮೂಲ್ಯಳ ಚಿತ್ತಾರದ ಚಿತ್ರ ಬದಲಾಗಿಲ್ಲ.

ಭರತನಾಟ್ಯ ಬಲ್ಲ ಹಾಗೂ ಕರಾಟೆಯ ಪಟ್ಟುಗಳನ್ನು ಬಲ್ಲ ಅಮೂಲ್ಯ ಬಾಲನಟಿಯಾಗಿ ಚಿತ್ರರಂಗಕ್ಕೆ ಬಂದವರು. ಬಾಲ್ಯದಲ್ಲೇ ಅಪ್ಪನನ್ನು ಕಳೆದುಕೊಂಡವರು. ನಾಯಕಿಯಾದ ನಂತರವೂ ಸಿನಿಮಾಕ್ಕೆ ಅಂಟಿಕೂರದೆ, ಕಾಲೇಜು–ಕಲಿಕೆ ಎಂದು ಓಡಾಡಿಕೊಂಡಿದ್ದವರು. ‘ಮನಸಾಲಜಿ’ ಚಿತ್ರದ ನಂತರವಂತೂ ಒಂದಷ್ಟು ಕಾಲ ಸಿನಿಮಾ ಸಹವಾಸ ಸಾಕು ಎನ್ನುವಂತಿದ್ದರು. ‘ಓದುವ ಕಾಲಕ್ಕೆ ಓದಬೇಕು. ಸಿನಿಮಾ ಯಾವಾಗ ಬೇಕಾದರೂ ಮಾಡಬಹುದು’ ಎಂದೊಮ್ಮೆ ಅಮೂಲ್ಯ ಹೇಳಿದ್ದರು.

ನಟನೆಯ ಬಗ್ಗೆ ತೀರಾ ಮಹತ್ವಾಕಾಂಕ್ಷೆಯೇನೂ ಅಲ್ಲದ ಅಮೂಲ್ಯ ಅವರಿಗೆ ಸಿಕ್ಕಿದ ಬಹುತೇಕ ಅವಕಾಶಗಳು ಹುಡುಗಾಟದ ಹುಡುಗಿಯ ಪಾತ್ರಗಳೇ. ನಾಯಕನಿಗೆ ಜೋರು ಮಾಡುವ ಮೊದ್ದು ಹುಡುಗಿಯ ಪಾತ್ರಗಳು ಅವರಿಗೆ ಜನಪ್ರಿಯತೆಯನ್ನೂ ತಂದುಕೊಟ್ಟವು. ‘ಕೃಷ್ಣ ರುಕ್ಕು’, ‘ಶ್ರಾವಣಿ ಸುಬ್ರಹ್ಮಣ್ಯ’, ‘ಗಜಕೇಸರಿ’, ‘ಮದುವೆಯ ಮಮತೆಯ ಕರೆಯೋಲೆ’, ‘ಚೈತ್ರದ ಚಂದ್ರಮ’, ‘ರಾಮ್ ಲೀಲಾ’ – ಹೀಗೆ, ಸಿನಿಮಾ ಯಾವುದಾದರೂ ಅಮೂಲ್ಯ ನಟಿಸಿದ ಪಾತ್ರಗಳಲ್ಲಿ ಹೆಚ್ಚು ವ್ಯತ್ಯಾಸವೇನೂ ಇಲ್ಲ.

ಪಕ್ಕದ್ಮನೆ ಹುಡುಗಿಯ ಇಮೇಜ್ ಅಮೂಲ್ಯ ಅವರಿಗೆ ಎಷ್ಟರಮಟ್ಟಿಗೆ ಅಂಟಿಕೊಂಡಿದೆಯೆಂದರೆ, ನಿರ್ದೇಶಕನೊಬ್ಬನ ಜೊತೆ ಅವರ ಹೆಸರನ್ನು ತಳಕು ಹಾಕಿ ಹುಟ್ಟಿಕೊಂಡ ಗಾಸಿಪ್ ಅನ್ನು ಗಂಭೀರವಾಗಿ ತೆಗೆದುಕೊಂಡವರು ಕಡಿಮೆ. ಆದರೆ, ಈ ಗಾಸಿಪ್ ಅಮೂಲ್ಯ ಅವರನ್ನು ನೋಯಿಸಿತ್ತು. ತದನಂತರ, ಆ ಗೊಂದಲದಿಂದ ಹೊರಬಂದಿದ್ದ ಅವರು ಸಿನಿಮಾಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದರು.

ಅಮೂಲ್ಯ ನಟನೆಯ ಇತ್ತೀಚಿನ ಚಿತ್ರ ‘ಮಾಸ್ತಿಗುಡಿ’ ಅವರ ಮದುವೆಯ ದಿನದಂದೇ (ಮೇ 12) ತೆರೆ ಕಾಣುತ್ತಿರುವುದು ವಿಶೇಷ. ನಾಗಶೇಖರ್ ನಿರ್ದೇಶನದ ಈ ಸಿನಿಮಾದಲ್ಲಿ ವಿಜಯ್‌ಗೆ ಜೋಡಿಯಾಗಿ ನಟಿಸಿದ್ದಾರೆ.

ಪರಿಸರ ಕಾಳಜಿಯ ಬಗ್ಗೆ ಮಾತನಾಡುವ ‘ಮಾಸ್ತಿಗುಡಿ’ ಸಿನಿಮಾದ ಬಗ್ಗೆ ಗಾಂಧಿನಗರದಲ್ಲಿ ಒಳ್ಳೆಯ ಮಾತುಗಳಿವೆ. ಈ ಚಿತ್ರವನ್ನು ಅಮೂಲ್ಯ ಅವರಿಗೆ ಮದುವೆಯ ಉಡುಗೊರೆ ಎಂದೂ ಹೇಳಲಾಗುತ್ತಿದೆ. ಸದ್ಯಕ್ಕಂತೂ ಅಮೂಲ್ಯ ಸಿನಿಮಾದ ಬಗ್ಗೆ ಯೋಚಿಸುತ್ತಿಲ್ಲ. ಜಗದೀಶ್ ಅವರೊಂದಿಗೆ ಕೌಟುಂಬಿಕ ಜೀವನ ರೂಪಿಸಿಕೊಳ್ಳುವ ಉಮೇದಿನಲ್ಲಿದ್ದಾರೆ.

ಬೇಡಿಕೆ ಇನ್ನೂ ಇರುವಾಗಲೇ ಯುವನಟಿಯೊಬ್ಬಳು ಮದುವೆಯಾಗುವುದು ಚಿತ್ರರಂಗದಲ್ಲಿ ಅಪರೂಪ. ಈ ನಿಟ್ಟಿನಲ್ಲಿ ಕೂಡ ಅಮೂಲ್ಯ ಅವರ ನಿರ್ಧಾರ ವಿಶೇಷವಾದುದು.

■ ರಘು